ಸೃಜನಿ

SRUJANI: Indian Journal of Innovative Research and Development (SIJIRD)
Volume-1 Issue 5, November-December 2022, Pp. 162- 165
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ತಮಿಳುನಾಡಿನ ಕಾಪಿಲಿಯನ್ ಸಮುದಾಯ: ಒಂದು ಅಧ್ಯಯನ

**ಡಾ.ದಯಾನಂದ ಜೆ. ಎಸ್***

*ಉಪನ್ಯಾಸಕರು, ಸಮಾಜಶಾಸ್ತ್ರ ಅಧ್ಯಯನ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಳೇಬೀಡು.

***Abstract:***

*ಪ್ರಸಕ್ತ ಅಧ್ಯಯನ ಕರ್ನಾಟಕದಿಂದ ತಮಿಳುನಾಡಿಗೆ ವಲಸೆ ಹೋಗಿರುವ ಕಾಪಿಲಿಯನ್ ಸಮುದಾಯವನ್ನು ಕೇಂದ್ರೀಕರಿಸಿದೆ. ಈ ಸಮುದಾಯದವರು ತಮ್ಮ ಮೂಲ ವಾಸಸ್ಥಾನವಾಗಿದ್ದ ತುಂಗಭದ್ರಾ ತೀರದಲ್ಲಿ ರಾಜನೊಡನೆ ಉಂಟಾದ ಧಾರ್ಮಿಕ ಘರ್ಷಣಾತ್ಮಕ ಪರಿಸ್ಥಿತಿಯಿಂದಾಗಿ ತಮಿಳುನಾಡಿಗೆ ವಲಸೆ ಹೋದವರು. ಸುಮಾರು 6–7 ತಲೆಮಾರುಗಳ ಹಿಂದೆಯೇ ವಲಸೆ ಹೋದರೂ ತಮ್ಮ ಮೂಲ ನೆಲೆಯಾದ ಕರ್ನಾಟಕದೊಡನೆ, ಕನ್ನಡ ಭಾಷೆಯೊಡನೆ ಇವರು ಸಂಬಂಧ–ಸಂಪರ್ಕಗಳನ್ನಿರಿಸಿಕೊಂಡಿದ್ದಾರೆ. ಮೂಲತಃ ಒಕ್ಕಲಿಗರಾದ ಕಾಪಿಲಿಯನ್‌ರು ಜಾತಿ ವ್ಯವಸ್ಥೆಯೊಳಗೆ ವಲಸಿಗ ಸಮುದಾಯದವರಾಗಿದ್ದರೂ ಪ್ರಾಬಲ್ಯವನ್ನು ಉಳಿಸಿಕೊಂಡು ಉನ್ನತ ಸ್ಥಾನಮಾನವನ್ನು ಹೊಂದಿದ್ದಾರೆ.*

***Keywords:*** *ವಲಸೆ, ಜಾತಿವ್ಯವಸ್ಥೆ, ಜಾತಿ ಸಂಘಟನೆ. ಕಾಪಿಲಿಯನ್, ಒಕ್ಕಲಿಗರು.*

## ಪೀಠಿಕೆ

ಭಾರತೀಯ ಸಾಮಾಜಿಕ ರಚನೆಯೊಳಗೆ ಜಾತಿ ವ್ಯವಸ್ಥೆ ಪ್ರಮುಖ ಪಾತ್ರ ವಹಿಸುತ್ತದೆ. ಜಾತಿ ಪದ್ಧತಿಯ ಮುಖ್ಯ ಜೀವಾಳ ಹಳ್ಳಿಯ ಜನತೆಯಲ್ಲಿದೆ. ಇತ್ತೀಚೆಗೆ ಔದ್ಯೋಗಿಕ ಕ್ರಾಂತಿಯ ಪರಿಣಾಮವಾಗಿ ಹಳ್ಳಿಯಲ್ಲಿ ಜಾತಿ ಪದ್ಧತಿ ವೈಶಿಷ್ಟ್ಯವನ್ನು ಕಳೆದುಕೊಂಡು ಕೇವಲ ಬಾಹ್ಯಾಚಾರಗಳನ್ನು ಅನುಸರಿಸಿಕೊಂಡು ಔಪಚಾರಿಕವಾಗುತ್ತಿದೆ (ನಂಜಮ್ಮಣ್ಣಿ, 2003). ಆದರೂ ಒಂದು ದೃಷ್ಟಿಯಲ್ಲಿ ಶೈಕ್ಷಣಿಕ ಮಟ್ಟ ಹೆಚ್ಚಿದಂತೆಲ್ಲಾ ಜಾತಿ ವ್ಯವಸ್ಥೆ ಮರೆಯಾಗುತ್ತದೆ ಎಂಬ ಭಾವನೆ ದೂರವಾಗುತ್ತಿದೆ. ಇಂದಿಗೂ ಜಾತಿ ಪಂಚಾಯಿತಿಗಳು, ಜಾತಿ ಆಧಾರಿತ ಶಿಕ್ಷಣ ಸಂಸ್ಥೆಗಳು, ಮಠಗಳು ಹಾಗೂ ಇನ್ನೂ ಅನೇಕ ವ್ಯವಸ್ಥೆಗಳ ಮೂಲಕ ಹೆಚ್ಚು ಪ್ರಬಲವಾಗುವಂತೆ ಮಾಡುತ್ತಿದೆ. ಒಂದರ್ಥದಲ್ಲಿ ಜಾತಿ ಧೃವೀಕರಣ ಹೆಚ್ಚು ಹೆಚ್ಚು ಗಟ್ಟಿಯಾಗುತ್ತಿದ್ದು ಜಾತಿಯ ಮೂಲಕ ಗುರುತಿಸುವಿಕೆ ಹೆಚ್ಚಾಗುತ್ತಿದೆ. ಈ ಹಿನ್ನಲೆಯಲ್ಲಿ ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಪ್ರಸ್ತುತ ಅಧ್ಯಯನದಲ್ಲಿ ಕಾಪಿಲಿಯನ್ ಸಮುದಾಯದ ಸಾಮಾಜಿಕ ನಿಯಂತ್ರಣದ ಬಗ್ಗೆ ಅಧ್ಯಯನ ಮಾಡುವ ಉದ್ದೇಶವನ್ನು ಹೊಂದಿದೆ. ಈ ಪ್ರಸ್ತುತ ಅಧ್ಯಯನಕ್ಕೆ ತಮಿಳುನಾಡಿನ ತೇನಿ ಜಿಲ್ಲೆಯ ಉತ್ತಮಪಾಳ್ಯಂ ತಾಲೂಕನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

***Please cite this article as:*** ದಯಾನಂದ ಜೆ. ಎಸ್. (2022). ತಮಿಳುನಾಡಿನ ಕಾಪಿಲಿಯನ್ ಸಮುದಾಯ: ಒಂದು ಅಧ್ಯಯನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 1(5), 162–165.

**ಸಂಶೋಧನಾ ವಿಧಾನಗಳು**

ಮಾಹಿತಿ ಸಂಗ್ರಹಣೆಗಾಗಿ 'ಉದ್ದೇಶಿತ ಸ್ನೋಬಾಲ್ ಮಾದರಿಯನ್ನು ಬಳಸಿ 300 ಕುಟುಂಬಗಳನ್ನು ಪ್ರಾಥಮಿಕ ಮಾಹಿತಿ ಸಂಗ್ರಹಣೆಗಾಗಿ ಆಯ್ಕೆಮಾಡಿ ಅಧ್ಯಯನ ಮಾಡಲಾಗಿದೆ. ಈ ಅಧ್ಯಯನಕ್ಕೆ ಪೂರಕವಾದ ಮಾಹಿತಿಯನ್ನು ಸಂದರ್ಶನ ಕೈಪಿಡಿಯ ನೆರವಿನಿಂದ ಪಡೆಯಲಾಗಿದೆ. ಕುಟುಂಬಗಳಿಗೆ ಭೇಟಿ ನೀಡಿ ಪ್ರತಿ ಕುಟುಂಬದ ಹಿರಿಯರಿಂದ ಮಾಹಿತಿಯನ್ನು ಪಡೆದು, ಅಗತ್ಯವೆನಿಸಿದಾಗ ಇತರ ಸದಸ್ಯರನ್ನೂ ಸಂದರ್ಶನ ಪ್ರಕ್ರಿಯೆಯಲ್ಲಿ ಸೇರ್ಪಡಿಸಲಾಗಿದೆ.

ಅಧ್ಯಯನದ ವಿಷಯಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ಮಾಹಿತಿಯನ್ನಷ್ಟೇ ಅಲ್ಲದೆ, ಇದಕ್ಕೆ ಪೂರಕವಾದ ಉಪಯುಕ್ತವಾದ ಮಾಹಿತಿಯನ್ನು ಆನುಷಂಗಿಕ ಮೂಲಗಳಿಂದ ಕೂಡ ಸಂಗ್ರಹಿಸಲಾಗಿದೆ. ಪ್ರಸಕ್ತ ಅಧ್ಯಯನಕ್ಕೆ ಪೂರಕವಾದ ಗ್ರಂಥಗಳು, ಸಂಯೋಜಿತ ವರದಿಗಳು, ಸಂಶೋಧನಾ ಲೇಖನಗಳು, ಕೈಪಿಡಿಗಳು, ದಿನಪತ್ರಿಕೆಯ ಲೇಖನಗಳು, ವಿಷಯಕ್ಕೆ ಅಗತ್ಯವಾದ ಸಂಪನ್ಮೂಲ ಸಾಹಿತ್ಯ ಮುಂತಾದವುಗಳನ್ನು ವಿಶ್ವವಿದ್ಯಾನಿಲಯ ಗ್ರಂಥಾಲಯಗಳು ಹಾಗೂ ಹಿರಿಯರಿಂದ ತಿಳಿದು ಬಂದ ವಿಷಯ ಮೂಲಗಳಿಂದ ಪಡೆಯಲಾಗಿದೆ.

**ವಿಷಯ ಮಂಡನೆ**

ಕಾಪಿಲಿಯನ್ ಸಮುದಾಯದಲ್ಲೂ ಜಾತಿ ಸಂಘಟನೆ ಪ್ರಬಲವಾಗಿದೆ. ಅವರು ವಾಸಿಸುವ ಕೆಲವು ಪ್ರದೇಶಗಳಲ್ಲಿ ಬಹುಸಂಖ್ಯಾತರಾಗಿಯೂ ಕಂಡು ಬರುವುದರಿಂದ, ಇವರು ಪ್ರಬಲ ಜಾತಿಯವರಾಗಿ ಆ ಸಮಾಜದಲ್ಲಿ ಹೆಚ್ಚು ಗೌರವಕ್ಕೂ ಪಾತ್ರರಾಗಿದ್ದಾರೆ. ಇವರು ವಾಸಿಸುವ ಪ್ರತಿ ಗ್ರಾಮ ಮತ್ತು ಪಟ್ಟಣಗಳಲ್ಲಿ ಜಾತಿ ಸಮಿತಿಗಳನ್ನು ರಚಿಸಿಕೊಂಡು ಆ ಮೂಲಕ ಪಂಚಾಯಿತಿಗಳನ್ನು ಏರ್ಪಡಿಸಿ ಅನೇಕ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡು ಕೊಳ್ಳುತ್ತಿದ್ದಾರೆ. ಪ್ರತಿ ಗ್ರಾಮದ ಬೀದಿಗಳಲ್ಲೂ ಕೂಟಗಳನ್ನು ಮಾಡಿಕೊಂಡು, ಅದಕ್ಕೆ ಒಂದು ಕಛೇರಿ ಪ್ರಾರಂಭಿಸಿ, ಜಾತಿ ಜನರಿಗೆ ಸಂಬಂಧಿಸಿದ ಅನೇಕ ವಿಷಯಗಳನ್ನು ನಿರ್ವಹಿಸುತ್ತಿದ್ದಾರೆ.

ಜಾತಿ ಸಂಘಟನೆಯಲ್ಲಿ ಅತಿ ಮುಖ್ಯ ಪಾತ್ರವಹಿಸುವವರು ಅಥವಾ ಪ್ರಧಾನ ವ್ಯಕ್ತಿ ಎಂದರೆ ನಾಟಂಕಾರ್. ಜನರು ಇವರನ್ನು ತುಂಬಾ ಭಕ್ತಿ ಮತ್ತು ಗೌರವದಿಂದ ಕಾಣುತ್ತಾರೆ. ಇವರು ಹೇಳಿದಂತೆ ಜನರು ನಡೆದುಕೊಳ್ಳುತ್ತಾರೆ ಮತ್ತು ಅವರ ಈ ಅಧಿಕಾರಕ್ಕೆ ಸಾಮಾಜಿಕ ಸ್ವೀಕೃತಿಯೂ ಇದೆ. ನಮ್ಮ ಅಧ್ಯಯನ ನಡೆದ ಕಾಲಘಟ್ಟದಲ್ಲಿ ಎನ್.ಕೆ.ಪಿ.ಆರ್.ಪಿ. ಗಾಂಧವನ್ ರವರು ನಾಟಂಕಾರ್ ಆಗಿದ್ದು, ಈ ಸ್ಥಾನ ವಂಶಪಾರಂಪರ್ಯವಾಗಿದೆ.

ಈ ಸಮುದಾಯದ ಯಾವುದೇ ವಿವಾದಗಳು ಮೊದಲು ಜಾತಿ ಪಂಚಾಯಿತಿಯಲ್ಲಿ ತೀರ್ಮಾನಗೊಂಡು ಅಲ್ಲಿ ಸರಿಯಾದ ಪರಿಹಾರಗಳು ದೊರೆಯದಿದ್ದಲ್ಲಿ ನ್ಯಾಯಾಂಗ ವ್ಯವಸ್ಥೆಯವರೆಗೆ ಹೋಗುತ್ತವೆ. ನಾಟಂಕಾರ್‌ರವರು ಜಾತಿ ಪಂಚಾಯಿತಿಗಷ್ಟೇ ಮುಖ್ಯರಾಗಿರದೆ, ಆ ಸಮುದಾಯದವರ ದೇವಾಲಯದ ಮುಖ್ಯಸ್ಥರಾಗಿ, ಹಬ್ಬ, ಜಾತ್ರೆಯ ಮುಖ್ಯಸ್ಥರಾಗಿ ವಿವಾಹ ಸಮಾರಂಭದಲ್ಲಿ ಗಣ್ಯರಾಗಿ ಪ್ರಮುಖ ಪಾತ್ರ ವಹಿಸುತ್ತಾರೆ.

ಐದು ವರ್ಷಗಳಿಗೊಮ್ಮೆ ನಡೆಯುವ ರಥೋತ್ಸವದಲ್ಲಿ ನಾಟಂಕಾರರ ಪಾತ್ರ ಪ್ರಮುಖವಾಗಿರುತ್ತದೆ. ಆ ರಥೋತ್ಸವ ಕಂಬಮ್‌ನಲ್ಲಿ ಬಹಳ ವಿಜೃಂಭಣೆಯಿಂದ ನೆರವೇರುತ್ತಿದ್ದು, ನಾಟಂಕಾರ್‌ರವರು


ಕುದುರೆಯ ಮೇಲೆ ಬಂದು ರಥವನ್ನು ಏರಿ ಹೆಗಲ ಮೇಲೆ ಹಾಕಿಕೊಂಡಿದ್ದ ವಸ್ತ್ರ ಕೈಯಲ್ಲಿ ಹಿಡಿದು ಜನರಿಗೆ ತೋರಿಸುವ ಮೂಲಕ ರಥ ಎಳೆಯಲು ಚಾಲನೆ ನೀಡುತ್ತಾರೆ.

ಕಾಪಿಲಿಯನ್ನರು ತಮ್ಮ ಜಾತಿ ಪಂಚಾಯಿತಿಯಲ್ಲಿ ಕುಟುಂಬ ಕಲಹಗಳಾದಂತಹ ಅಣ್ಣ ತಮ್ಮಂದಿರ, ಜಮೀನು ಮತ್ತು ಆಸ್ತಿಯ ವಿಚಾರ, ಅತ್ತೆ–ಸೊಸೆ ಅಥವಾ ಗಂಡ ಹೆಂಡತಿಯ ನಡುವೆ ಏರ್ಪಡುವ ಭಿನ್ನಾಭಿಪ್ರಾಯಗಳು, ಜಮೀನು ಒತ್ತುವರಿಗಳು, ಇತರರೊಂದಿಗೆ ಜಗಳಗಳು ಮತ್ತು ದೈಹಿಕ ಹಲ್ಲೆಗಳು – ಹೀಗೆ ಇನ್ನಿತರ ಕಲಹಗಳಿಗೆ ಸೂಕ್ತವಾದ ತೀರ್ಮಾನಗಳನ್ನು ನೀಡಿ ಮನಸ್ತಾಪಗಳಾಗದಂತೆ ನೋಡಿಕೊಳ್ಳುತ್ತಾರೆ. ನಾಟಂಕಾರ್‌ರವರು ನೀಡುವ ತೀರ್ಮಾನವನ್ನು ಜನರು ಒಪ್ಪಿಕೊಂಡು ಪಾಲನೆ ಮಾಡುತ್ತಾರೆ. ಉದಾಹರಣೆಗೆ ಹೊಡೆದಾಟದ ಸಂದರ್ಭದಲ್ಲಿ ಯಾರಾದರು ಇನ್ನೊಬ್ಬರಿಗೆ ಚಪ್ಪಲಿಯಲ್ಲಿ ಹೊಡೆದರೆ ಹೊಡೆದ ವ್ಯಕ್ತಿ ಆ ಚಪ್ಪಲಿಯನ್ನು ಹಿಡಿದು ಬೀದಿಗಳಲ್ಲಿ ಸುತ್ತಬೇಕೆಂಬ ಶಿಕ್ಷೆಯನ್ನು ವಿಧಿಸಲಾಗುತ್ತದೆ. ಕೋಷ್ಟಕದಲ್ಲಿ ಕಾಪಿಲಿಯನ್ ಸಮುದಾಯದಲ್ಲಿ ಆಂತರಿಕ ಕಲಹಗಳು ಅಥವಾ ಭಿನ್ನಾಭಿಪ್ರಾಯಗಳು ಹೇಗೆ ಬಗೆ ಹರಿಯುತ್ತವೆ ಎಂಬುದರ ಬಗ್ಗೆ ಮಾಹಿತಿ ಇದೆ.

**ಕೋಷ್ಟಕ 1: ಸಮುದಾಯದೊಳಗಿನ ಸಂಘರ್ಷ ಪರಿಹರಿಸಿಕೊಳ್ಳುವ ಬಗೆ**

| ಕ್ರ.ಸಂ. | ಸಂಘರ್ಷ ಪರಿಹರಿಸಿಕೊಳ್ಳುವ ರೂಪಗಳು | ಆವೃತ್ತಿ | ಶೇಕಡವಾರು |
|---|---|---|---|
| 1 | ಜಾತಿ ಪಂಚಾಯಿತಿ | 212 | 70.67 |
| 2 | ಹಿರಿಯರ ಸಲಹೆ | 38 | 12.67 |
| 3 | ಸಮುದಾಯ ಮುಖಂಡರ ಸಲಹೆ | 30 | 10.00 |
| 4 | ಸ್ಥಳೀಯ ಮುಖಂಡರು | 10 | 03.33 |
| 5 | ನ್ಯಾಯಾಲಯ | 10 | 03.33 |
| | ಒಟ್ಟು | 300 | 100.00 |

**ಗ್ರಾಫ್ 1: ಸಮುದಾಯದೊಳಗಿನ ಸಂಘರ್ಷ ಪರಿಹರಿಸಿಕೊಳ್ಳುವ ಬಗೆ**




ಕೋಷ್ಟಕ 1ರಲ್ಲಿ ಮಾಹಿತಿ ಕಾಪಿಲಿಯನ್ ಸಮುದಾಯದವರು ತಮ್ಮ ಸಂಘರ್ಷದ/ವಿವಾದಗಳನ್ನು ಯಾವ ರೀತಿಯಲ್ಲಿ ಪರಿಹರಿಸಿಕೊಳ್ಳುವರು ಎಂಬುದನ್ನು ತೋರಿಸಲಾಗಿದೆ. ಒಟ್ಟು 300

ಮಾಹಿತಿದಾರರಲ್ಲಿ ಶೇಕಡ 70.67 ರಷ್ಟು ಜಾತಿ ಪಂಚಾಯಿತಿ ಮೂಲಕ ಕಲಹಗಳನ್ನು ಪರಿಹರಿಸಿಕೊಳ್ಳುತ್ತೇವೆಂದು ಹೇಳಿದರೆ, ಶೇಕಡ 12.67 ರಷ್ಟು ಸಮುದಾಯದ ಹಿರಿಯರ ಸಲಹೆ ಮೂಲಕ ಪರಿಹರಿಸಿಕೊಳ್ಳುತ್ತಾರೆ ಎಂದು ತಿಳಿದುಬರುತ್ತದೆ. ಇನ್ನುಳಿದವರಲ್ಲಿ ಶೇಕಡ 10 ರಷ್ಟು ಸಮುದಾಯದ ಮುಖಂಡರ ಸಲಹೆ ಪಡೆದು, ಶೇಕಡ 3.33 ರಷ್ಟು ಸ್ಥಳೀಯ ಮುಖಂಡರ ಮೂಲಕ ಹಾಗೂ ಶೇಕಡ 3.33 ರಷ್ಟು ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳುತ್ತಾರೆ.

ಒಟ್ಟಾರೆ ಕಾಪಿಲಿಯನ್ ಸಮುದಾಯದಲ್ಲಿ ಇಂದಿಗೂ ಜಾತಿ ಪಂಚಾಯಿತಿಯ ಮೂಲಕವೇ ಹೆಚ್ಚು ಜನರು ತಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುತ್ತಿರುವುದನ್ನು ಕಾಣಬಹುದಾಗಿದೆ. ಜಾತಿ ಸಂಘಟನೆ, ಜಾತಿ ಪಂಚಾಯಿತಿಗಷ್ಟೇ ಮುಖ್ಯವಾಗಿರದೆ, ಆ ಸಮುದಾಯದ ದೇವಾಲಯ, ಹಬ್ಬ, ಜಾತ್ರೆ, ವಿವಾಹ ಸಮಾರಂಭದಲ್ಲಿ ಪ್ರಮುಖ ಪಾತ್ರವಹಿಸುತ್ತಾರೆ.

ಆಧುನಿಕ ಸಮಾಜದಲ್ಲಿ ಸಾಮಾಜಿಕ, ಔಪಚಾರಿಕ ನಿಯಂತ್ರಣ ಸಾಧನವಾಗಿ, ಪೊಲೀಸ್, ನ್ಯಾಯಾಲಯಗಳು ಹೆಚ್ಚು ಪ್ರಭಾವ ಬೀರುತ್ತಿದ್ದರೆ ಕಾಪಿಲಿಯನ್ನರಲ್ಲಿ ಇಂದಿಗೂ ತಮ್ಮ ಸಾಂಪ್ರದಾಯಿಕ ಅನೌಪಚಾರಿಕ ನಿಯಂತ್ರಣ ಸಾಧನಗಳಾದ ಜಾತಿ, ಜಾತಿ ಪಂಚಾಯಿತಿ, ಧರ್ಮ, ಕುಟುಂಬಗಳು ಹೆಚ್ಚು ಪ್ರಭಾವಯುತವಾಗಿ ಕಾರ್ಯ ನಿರ್ವಹಿಸುತ್ತಿರುವುದು ಅಧ್ಯಯನದಿಂದ ತಿಳಿದುಬರುತ್ತದೆ.

**ಪರಾಮರ್ಶನ ಗ್ರಂಥಗಳು**


- ಗೋಪಾಲ್ ಬಾ.ರಾ., ಹೆಚ್.ಎಸ್. ಗೋಪಾಲರಾವ್ ಮತ್ತು ಪಿ.ವಿ. ಕೃಷ್ಣಮೂರ್ತಿ. (2000). *ತಮಿಳುನಾಡಿನ ಕನ್ನಡ ಶಾಸನಗಳು,* ಕನ್ನಡ ವಿಶ್ವವಿದ್ಯಾಲಯ.
- ನಂಜಮ್ಮಣ್ಣಿ ಎಂ. (2003). *ಭಾರತೀಯ ಸಾಮಾಜಿಕ ಸಂಸ್ಥೆಗಳು.* ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ.
- ಅಂಬಳಿಕೆ ಹಿರಿಯಣ್ಣ, (1999). *ಮಲೆನಾಡಿನ ವೈಷ್ಣವ ಒಕ್ಕಲಿಗರ ಸಂಸ್ಕೃತಿ.* ಕನ್ನಡ ಪುಸ್ತಕ ಪ್ರಾಧಿಕಾರ.
- Bhat, S.C. and Bhargava, K. Gopal. (2005). *Land and People of Indian States and Union Territories*. Kalpaz Publications.
- Rao. M.S.A. (1981). Some Aspects of Sociology of Migration. *Sociological Bulletin*, 39 (1). 30-35.